ದಿನಾಂಕಃ 20.03.2023 ರ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 22.08.2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ ಇ ಎಸ್ ವಕೀಲರಿಂದಃ **1** ರಿಂದ **3** ನೇ ಆರೋಪಿತರ ಪರವಾಗಿಃ

5. ಪುಟ್ಟಸ್ವಾಮಿರವರು ಮೃತಪಟ್ಟ ವಿಚಾರ ತಿಳಿದು ಆತನ ಶವ ಬಿದ್ದಿದ್ದ ಸ್ಥಳಕ್ಕೆ ನಾನು ಹೋದಾಗ ಬೆಳಿಗ್ಗೆ ಸುಮಾರು 7.00 ರಿಂದ 7.30 ಗಂಟೆಯಾಗಿತ್ತು. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಪೊಲೀಸರು ಮತ್ತು ಸ್ವಲ್ಪ ಜನರು ಸೇರಿದ್ದರು. ಆ ಸಮಯದಲ್ಲಿ ಪೊಲೀಸರು ನಿಮ್ಮನ್ನು ವಿಚಾರಿಸಿದ್ದರೇ ಎಂದರೆ ಸಾಕ್ಷಿ ಆಗ ಪೊಲೀಸರು ನಮ್ಮನ್ನು ವಿಚಾರಿಸಿಲ್ಲ ಎನ್ನುತ್ತಾರೆ. ಅದೇ ದಿನ ನಾವು ಗೀತಾಳನ್ನು ಕರೆದುಕೊಂಡು ಬೀರೂರು ಪೊಲೀಸ್ ಠಾಣೆಗೆ ದೂರನ್ನು ಕೊಡಲು ಹೋದಾಗ ಪೊಲೀಸರು ನನ್ನನ್ನು ವಿಚಾರಿಸಿದರು ಆಗ ನಾನು ಅವರಿಗೆ ನನಗೆ ತಿಳಿದಿದ್ದ ವಿಚಾರಗಳನ್ನು ತಿಳಿಸಿದ್ದೇನೆ.

6. ಶವವನ್ನು ನೋಡಿದ ಸ್ಥಳದಿಂದ ನಾನು ನೇರವಾಗಿ ಗೀತಾಳ ಮನೆಗೆ ಹೋದೆನು ನಂತರ ಗೀತಾಳನ್ನು ಕರೆದುಕೊಂಡು ಬೀರೂರು ಪೊಲೀಸ್ ಠಾಣೆಗೆ ಹೋದೆವು. ಆ ದಿನ ನೀವು ಪೊಲೀಸ್ ಠಾಣೆಗೆ ಹೋದಾಗ ಹಿಂದಿನ ದಿನ ಕ್ವಾಲೀಸ್ ವಾಹನವನ್ನು ನೋಡಿದ್ದಾಗಿ ಮತ್ತು ಅದರಲ್ಲಿ ನಾಲ್ಕು ಜನರು ಇದ್ದುದ್ದನ್ನು ಹೇಳಿದ್ದೀರಾ ಎಂದರೆ ಸಾಕ್ಷಿ ಸದರಿ ಕ್ವಾಲೀಸ್ ವಾಹನವನ್ನು ನೋಡಿದ್ದಾಗಿ ಮತ್ತು ಅದರಲ್ಲಿ ಪುಟ್ಟಸ್ವಾಮಿ ಮತ್ತು ಆತನ ಸ್ನೇಹಿತ ರಮೇಶ ಮತ್ತು ಇನ್ನೂ

ಮೂರು ಜನ ವ್ಯಕ್ತಿಗಳು ಇದ್ದುದ್ದಾಗಿ ಪೊಲೀಸರಿಗೆ ಹೇಳಿದ್ದೇನೆ ಎನ್ನುತ್ತಾರೆ.

7. ಆ ದಿನ ನಾನು ಪೊಲೀಸ್ ಠಾಣೆಯಲ್ಲಿ ಮುಕ್ಕಾಲು ಗಂಟೆ ಸಮಯದವರೆಗೂ ಇದ್ದೆವು. ಆ ದಿನ ನಿಮ್ಮ ಮತ್ತು ಗೀತಾರ ಜೊತೆ ನಿಮ್ಮ ಮಗ ಸಹ ಬಂದಿದ್ದರೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವು ಗೀತಾರವರ ಊರಿಗೆ ಹೋಗಿದ್ದಾಗಿ ಅಲ್ಲಿ ಕ್ವಾಲೀಸ್ ವಾಹನದಲ್ಲಿ ಪುಟ್ಟಸ್ವಾಮಿಯನ್ನು ಸೇರಿಸಿ ಐದು ಜನ ವ್ಯಕ್ತಿಗಳನ್ನು ನೋಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಗೀತಾ ಪುಟ್ಟಸ್ವಾಮಿಯನ್ನು ಮೆಚ್ಚಿ ಮದುವೆ ಯಾಗಿದ್ದರು ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್